ಈ ದಿನ ದಿನಾಂಕ: 06.08.2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ಜೆ ಹೆಚ್ ವಕೀಲರಿಂದ:

12. 2017 ರಲ್ಲಿ ಕಟ್ಟಡ ಕಾಮಗಾರಿ ಕಾಲಕ್ಕೆ 3 ಹಂತಗಳ ಕುರಿತಾಗಿ ಗುರುತನ್ನು ಹಾಕಲಾಗಿತ್ತು. ಆ ಯೋಜನೆಯಲ್ಲಿ ಆವರಣ ಗೋಡೆಯ ಜಾಗವನ್ನು ಸಹ ಗುರುತಿಸಲಾಗಿತ್ತು. ಆ ಯೋಜನೆ ಪೂರ್ವದಲ್ಲಿ ನಮ್ಮ ಆಸ್ತಿ ಆವರಣ ಗೋಡೆ ಇತ್ತು ಅವರ ಒಳಗಡೆ ಕಟ್ಟಡವನ್ನು ನಕ್ಷೆ ಪ್ರಕಾರ ಪ್ರಾರಂಭಿಸಿರುತ್ತೇವೆ. ಕಟ್ಟಡದ ಪೂರ್ವದಲ್ಲಿ ಆವರಣ ಗೋಡೆ ಇದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದಿ: 05.05.2023 ರಂದು ನಮ್ಮ ಜಾಗಕ್ಕೆ ಆವರಣ ಗೋಡೆ ಕಟ್ಟಿದ ನಂತರ ನೀರನ್ನು ಹರಿ ಬಿಡಲು ನಿಪಿ 26 ಬಾವಚಿತ್ರದಲ್ಲಿ ಕಂಡು ಬರುವ ತಗ್ಗನ್ನು ತೋಡಿದ್ದೆವು ಎಂದರೆ ಸರಿಯಲ್ಲ. ಆ ಗುಂಡಿ ದಕ್ಷಿಣ ಬಾಗದಲ್ಲಿತ್ತು ಅದನ್ನು ನಾವು ದಾವಾ ಆಸ್ತಿಯಲ್ಲಿ ಹಾಯ್ದು ಹೋಗುವಂತೆ ಹೊಸದಾಗಿ ತೋಡಿಸಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ವಾದಿಗಳು ಗುಂಡಿಯನ್ನು ತೋಡದಂತೆ ಮತ್ತು ತಮಗೆ ತೊಂದರೆ ಮಾಡದಂತೆ ಖುದ್ದಾಗಿ ಕೇಳಿಕೊಂಡಿದ್ದಾರೆ ಎಂದರೆ ಸರಿಯಲ್ಲ.

13. ಮುನ್ಸಿಪಾಲಿಟಿಯವರು ನಿಪಿ 26 ರಲ್ಲಿ ಕಂಡುಬರುವ ವಿಚಾರವಾಗಿ ಯಾವುದೆ ನೋಟಿಸ್ ನ್ನು ನಮಗೆ ಜಾರಿ ಮಾಡಿಲ್ಲ. ನಿಪಿ 26 ರಲ್ಲಿರುವ ಚರಂಡಿ ಬಹಳ ಹಿಂದಿನಿಂದ ಅಸ್ತಿತ್ವದಲಿದ್ದು ಅದು ನಮ್ಮ ಸಂಸ್ಥೆ ಜಾಗಕ್ಕೆ ಸೇರಿಲ್ಲ ನಾವು ಸಹ ಅದನ್ನು ಉಪಯೋಗಕ್ಕೆ ಇಟ್ಟುಕೊಂಡಿಲ್ಲ. ಕಳೆದ ಬಾರಿ ಆ ಗುಂಡಿ ನೈಸರ್ಗಿಕವಾಗಿ ಚಾಚಿಕೊಂಡಿದೆ ಎಂದು ನಾನು ಹೇಳಿಲ್ಲ. ದಿ: 15.05.2023 ರಂದು ವಾದಿಗಳು ಪ್ರತಿವಾದಿ ಸಂಸ್ಥೆಯ ಗುಂಡಿ ತೋಡಿ ನೀರನ್ನು ನಮ್ಮ ನಿವೇಶನಕ್ಕೆ ಬಿಡುತ್ತಿದ್ದಾರೆ ಎಂದು ಮುನ್ಸಿಪಾಲಿಟಿಗೆ ದೂರನ್ನು ಸಲ್ಲಿಸಿದ ವಿಚಾರ ಗೊತ್ತಿಲ್ಲ. ಆ ರೀತಿ ದೂರನ್ನು ದಾಖಲಿಸಿದ ಮೇಲೆ ನಾವು ಮತ್ತು ಮುನ್ಸಿಪಾಲಿಟಿಯವರು ಶಾಮಿಲ್ ಆಗಿ ಯಾವುದೆ ಕ್ರಮ ತೆಗೆದುಕೊಳ್ಳದಂತೆ ತಡೆ ಹಿಡಿದಿರುತ್ತೇವೆ ಎಂದರೆ ಸರಿಯಲ್ಲ.

14. ನಿಡಿ 2 ರಲ್ಲಿ ಕಾಣುತ್ತಿರುವುದು ನಮ್ಮ ಸಂಸ್ಥೆಯ ಸೂಪರ್ ಮಾರ್ಕೆಟ್ ಬಿಲ್ಡಿಂಗ್, ಗೋಡೌನ್ ಮತ್ತು ಆವರಣ ಗೋಡೆ ಎಂದರೆ ಸರಿ. ನಿಡಿ 2 ರಲ್ಲಿರುವ ಚಿತ್ರಣ ನಮ್ಮ ಆಸ್ತಿಯ ಉತ್ತರಬಾಗದ್ದಾಗಿದೆ. ಕಟ್ಟಡ ಪಶ್ಚಿಮದೆಡೆಗೆ ಇರುತ್ತದೆ. ನಿಡಿ 2 ರಲ್ಲಿ ಕಾಣುವ ಆವರಣ ಗೋಡೆಯ ಪಕ್ಕದಲ್ಲಿ ರಸ್ತೆಯಿಲ್ಲ ಆದರೆ ಉತ್ತರ ದಿಕ್ಕಿನಲ್ಲಿ ಚರಂಡಿ ದಾಟಿದ ಮೇಲೆ ಇರುತ್ತದೆ. ಸದರಿ ರಸ್ತೆ ಉತ್ತರ ದಕ್ಷಿಣಾಭಿಮುಖವಾಗಿದೆ. ಅಲ್ಲಿ ಪೂರ್ವ ಪಶ್ಚಿಮವಾಗಿ ರಸ್ತೆಯಿರುವುದಿಲ್ಲ. ಆ ರಸ್ತೆ ಅಳತೆ ಗೊತ್ತಿಲ್ಲ.

15. ನಿಡಿ 2 ರಲ್ಲಿ ಕಾಣುವ ಆವರಣ ಗೋಡೆಯ ಉದ್ದ 50-60 ಅಡಿ ಇರಬಹುದು. 6 ಅಡಿ ಎತ್ತರವಿರಬಹುದು. ನಿಡಿ 2 ರಲ್ಲಿ ಕಾಣುವ ಆವರಣ ಗೋಡೆಯನ್ನು ದಾವಾ ಆಸ್ತಿಯ ಪಶ್ಚಿಮಕ್ಕಿದ ರಸ್ತೆಯನ್ನು ಮುಚ್ಚಿ ಕಟ್ಟಲಾಗಿರುತ್ತದೆ ಎಂದರೆ ಸರಿಯಲ್ಲ. ಪಶ್ಚಿಮ ಬಾಗದಲ್ಲಿ ಯಾವುದೆ ರಸ್ತೆಯಿಲ್ಲ ಆವರಣ ಗೋಡೆಯನ್ನು ನಮ್ಮ ಜಾಗದಲ್ಲಿಯೇ ಕಟ್ಟಿರುತ್ತೇವೆ ಚರಂಡಿ ನಂತರ ರಸ್ತೆ ಇದೆ. ನಾವು ವಾದಿಗಳಿಗೆ ತೊಂದರೆ ಕೊಡಬೇಕೆಂದು ದಾವಾ ಆಸ್ತಿಯ ಪಶ್ಚಿಮ ಬಾಗದಲ್ಲಿದ್ದ ರಸ್ತೆಯನ್ನು ಮುಚ್ಚಿ ಆವರಣ ಗೋಡೆ ಕಟ್ಟಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ರಸ್ತೆಯನ್ನು ಮಚ್ಚಿದ್ದಲ್ಲದೇ ದಾವಾ ಆಸ್ತಿಯಲ್ಲಿ 2 ಅಡಿ ಪೂರ್ವ ಪಶ್ಚಿಮವಾಗಿ ಅಗಲ, 20 ಅಡಿ ಉತ್ತರ ದಕ್ಷಿಣ ಲಂಬವಾಗಿ ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ಒತ್ತುವರಿ ಮಾಡಿದ ಜಾಗ ದಾವಾ ಆಸ್ತಿಯ ದಕ್ಷಿಣದ ಪಶ್ಚಿಮೋತ್ತರವಾಗಿದೆ ಎಂದರೆ ಸರಿಯಲ್ಲ. ನಾವು ವಾದಿಗಳಿಗೆ ತೊಂದರೆ ಮಾಡಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾದೀನ ಹೊಂದಿದ್ದರೆಂದರೆ ಸಾಕ್ಷಿ ಅವರ ಆಸ್ತಿಯಲ್ಲಿರಬಹುದು ನನಗೆ ಗೊತ್ತಿಲ್ಲ ನಮಗೂ ಅವರಿಗೂ ಸಂಬಂದ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿ ಸಂಪೂರ್ಣ ವಿಸ್ತೀರ್ಣದಲ್ಲಿ ವಾದಿಗಳು ಸ್ವಾದೀನದಲ್ಲಿದ್ದರು ಮತ್ತು ದಾವೆ ನಂತರ ನಾವು ಒತ್ತುವರಿ ಮಾಡಿದ ಮೇಲೆ ಪೂರ್ವ ಪಶ್ಚಿಮ 2 ಅಡಿ ಉತ್ತರ ದಕ್ಷಿಣ 20 ಅಡಿ ಸ್ವಾದೀನ ಕಳೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

17. ಕಟ್ಟಡ ಕಟ್ಟುವ ಕಾಲಕ್ಕೆ ವ್ಯವಸ್ಥಾಪಕ ನಿರ್ದೇಶಕನಾದ ನನಗೆ ಅದರ ಜವಬ್ದಾರಿ ಇತ್ತು. ಆದ್ದರಿಂದ ನಾನು ನಿಯಮಿತವಾಗಿ ಕಟ್ಟಡದ ಕಾಮಗಾರಿ ವೀಕ್ಷಣೆಗೆ ಹೋಗುತ್ತಿದ್ದೆ. ನಾನು ವೀಕ್ಷಣೆಗೆ ಹೋದಾಗ ವಾದಿಗಳು ದಾವಾ ಆಸ್ತಿಯನ್ನು ಅಳತೆ ಮಾಡಿಸಿದ ವಿಚಾರ ಗಮನಕ್ಕೆ ಬಂದಿತ್ತೊ ಇಲ್ಲವೊ ಎಂದರೆ ಸಾಕ್ಷಿ ನನಗೆ ಗೊತ್ತೆ ಇಲ್ಲ ಎಂದು ನುಡಿಯುತ್ತಾರೆ. ಡಿಸೆಂಬರ್ 2023 ರಂದು ವಾದಿಗಳು ಅಬಿಯಂತರರನ್ನು ಕರೆದುಕೊಂಡು ತಮ್ಮ ಆಸ್ತಿ ಅಳತೆ ಮಾಡಿಸಿದ್ದಾರೆ ಮತ್ತು ಆ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾವು ದಾವಾ ಆಸ್ತಿಯನ್ನು ಒತ್ತುವರಿ ಮಾಡಿದ ವಿಚಾರ ಅವರ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಆಯುಕ್ತರನ್ನು ನೇಮಿಸಿ ದಾವಾ ಆಸ್ತಿಯನ್ನು ಅಳತೆ ಮಾಡಿಸಲು ನಮಗೆ ತೊಂದರೆ ಇಲ್ಲ.

18. ನಮ್ಮ ಆವರಣ ಗೋಡೆ ಅಕ್ರಮ ಕಟ್ಟಡ ಎಂದರೆ ಸರಿಯಲ್ಲ. ದಾವೆ ಪೂರ್ವದಲ್ಲಿ ದಾವಾ ಆಸ್ತಿಯಲ್ಲಿದ್ದ ತಳಪಾಯವನ್ನು ನಾವು ಕಿತ್ತು ಹಾಕಿದ ಕಾರಣಕ್ಕಾಗಿ ವಾದಿಗಳು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಹೊಂದಿಕೊಂಡುಕಟ್ಟಿರುವ ಆವರಣ ಗೋಡೆ ಅಕ್ರಮವೆಂದು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆವರಣ ಗೋಡೆ ನಿರ್ಮಾಣ ಮಾಡಲು ನಮಗೆ ಅನುಮತಿ ಇರಲಿಲ್ಲ ಎಂದರೆ ಸರಿ.

19. ನಿಡಿ 7 ರ ಆದೇಶದ ಕಾಲಕ್ಕೆ ಆವರಣ ಗೋಡೆ ಇತ್ತು. ನಿಡಿ 7 ರ ಆದೇಶದ ಕಾಲಕ್ಕೆ ನಮ್ಮ ಆಸ್ತಿಯಲ್ಲಿ ಆವರಣ ಗೋಡೆ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ 7 ರ ಪೂರ್ವದಲ್ಲಿ ಪರಿವೀಕ್ಷಣೆಯಾಗಿದ್ದು ಆ ಕಾಲಕ್ಕೆ ನಾನು ಸಹ ಇದ್ದೆ. ಆ ಅಳತೆ ಕಾಲಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯವರು ಬಾವಚಿತ್ರ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 7 ರ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೇ ನನಗೆ ಮಾಹಿತಿ ಇದೆ. ಆ ಪ್ರಕರಣಕ್ಕೆ ಸಂಬಂಧಪಟ್ಟ ಸಂಪೂರ್ಣ ದಾಖಲೆ ನಮ್ಮ ಬಳಿ ಇದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಸಂಪೂರ್ಣ ಮಾಹಿತಿ ನಮ್ಮ ಬಳಿ ಇದ್ದರು ಸಹ ಆವರಣ ಗೋಡೆ ಇಲ್ಲದಿರುವ ವಿಚಾರ ಬೆಳಕಿಗೆಬಾರದೆಂದು ಉದ್ದೇಶಪೂರ್ವಕವಾಗಿ ನಾವು ದಾಖಲೆಗಳನ್ನು

ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಿಡಿ 7 ರ ಪ್ರಕರಣಕ್ಕೆ ಸಂಬಂದಪಟ್ಟ ಸಂಪೂರ್ಣ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ ಆದರೆ ನಮ್ಮ ಬಳಿ ಇರುವುದು ನಿಡಿ 7 ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ.

20. ಸರ್ವೆ ನಂ. 77/2 ಹಾಗೂ 77/3 ರಲ್ಲಿ ಪೋಡಿ ದುರಸ್ತಿ ಕಾಲಕ್ಕೆ ವ್ಯತ್ಯಾಸಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 77/2 ಎ, ಸರ್ವೆ ನಂ. 77/2 ಎ ಪಿ16 ಎಂದು ಆಗಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ನಮ್ಮ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಪ್ರಕರಣಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಸಂಪೂರ್ಣ ದಾಖಲಾತಿ ಹೊಂದಿದ್ದರು ಸಹ ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅಸಲು ದಾವೆ ಸಂ. 136/1991 ರ ಆದೇಶಕ್ಕೆ ವಿರುದ್ದವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು**)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.